1885ನೇ ಇಸವಿ ಅರ್ಜೀ ನಂಬರ್ 207.

ಮೃತಪಟ್ಟ ಬೆಂಗಳೂರು ಕೋಮಟಿಪೇಟೆ ಕೊತ್ತಾ ನಾರಣಪ್ಪನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಕೊತ್ತಾ ಮುನಿಸಾಮಯ್ಯಶೆಟ್ಟಿ, ಮೃತಪಟ್ಟ ಸದರೀ ನಾರಣಪ್ಪನವರಿಗೆ ತಮ್ಮ ಆಗಬೇಕೆಂಬ ಹಕ್ಕುದಾರೀ ಮೇಲೆ ಬೆಂಗಳೂರು ಸ್ಥಳದ ಮುನಿಸಾಮಯ್ಯಶೆಟ್ಟಿ, ಬೆಂಗಳೂರು ಕೋಮಟಿ ಪೇಟೆ ವಾಸಸ್ಥರಾಗಿ ಮೃತಪಟ್ಟ ಸದರೀ ನಾರಣಪ್ಪನವರ ಜೆಂದಗಿ ಬ ಗ್ಯಾಗಿ ಬರತಕ್ಕ ಸೂಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇಆಕ್ಟ್ ಮೇರೆಗೆ ಸರಟಿಫಿಕೇಟ್ ಬ್ಯಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಮುನಿಸಾಮಯ್ಯ ಕಟ್ಟಿ ಅರ್ಜೀಯನ್ನು 1885ನೇ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 3ರಲ್ಲಿ ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಸೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಾರಣಪ್ಪನ ಆಸ್ತಿಗೆ ಹ ಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಯಿರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1885ನೇ ಇಸವಿ ಆಗಸ್ಟ್ ತಿಂಗಳು 3ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1885ನೇ ಇಸವಿ ಅರ್ಜೀ ನಂಬರ್ 260.

ಮೃತಪಟ್ಟ ಚಿಲ್ಲಘಟ್ಟದ ತಾಲ್ಲೂಕು ಚಿಂತಗಂಡ್ಲು ತಿರುಮಲಪ್ಪ ಇವರ ತಮ್ಮ ನಾರಣಪ್ಪನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಸುಬ್ಬಾಯಪ್ಪ, ಮೃತಪಟ್ಟ ತಿರುಮಲಪ್ಪ, ನಾರಣಪ್ಪ ಸದರೀ ಸುಬ್ಬಾಯಪ್ಪನಿಗೆ ತಂದೆ ಮತ್ತು ಚಿಕ್ಕಪ್ಪನಾಗಬೇಕೆಂ ಬ ಹಕ್ಕುದಾರಿ ಮೇಲೆ ಚಿಂತಗೆಂಡ್ಲು ಸ್ಥಳದ ಸುಬ್ಬಾಯಪ್ಪನು, ಚಿಂತಗಂಡ್ಲು ವಾಸಸ್ಥರಾಗಿ ಮೃತಪಟ್ಟ ತಿರುಮಲಪ್ಪ, ನಾರಣಪ್ಪನ ಜೆಂದ ಗಿ ಬ್ಯಾಗಿ ಬರತಕ್ಕ ಸೂಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಸುಬ್ಬಾಯಪ್ಪನ ಅರ್ಜೀಯನ್ನು 1885ನೇ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 3ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಸೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ತಿರುಮಲಪ್ಪ, ನಾರಣಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1885ನೇ ಇಸವಿ ಜುಲೈ ತಿಂಗಳು 29ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮದಸ್ತಖತ್ತೊಡನೆ ಕೊಡೋಣಾಗಿದೆ.

ಸಿ. ಕ್ರೈಸ್,
ಸಬ ಜಡ್ಜ.

ಕೋಲಾರ ಡಿಸ್ಟ್ರಿಕ್ಟ್.

ತಾರೀಖು 9ನೇ ಜುಲೈ 1885.

ಸ್ಯ 1884—85ನೇ ಇಸವಿಯ ಬಡ್ಡಿ ಪೈಸಲ್ ಬಗ್ಯೆ ತಮ್ಮತಮ್ಮ ಪ್ಯಾಸ್ ಬುಕ್ಕುಗಳನ್ನು ಸಾಧ್ಯವಾದ ಮಟ್ಟಿಗೆ ಜಾಗ್ರತೆಯಲ್ಲಿ ಹಾಜರ್ಮಾಡಬೇಕೆಂದು ಕೋಲಾರ ಡಿಸ್ಟ್ರಿಕ್ಟ ಗವರ್ನಮೆಂಟ್ ಸೇವಿಂಗ್ಸ್ ಬ್ಯಾಂಕ ಡಿಪಾಜಿಟ್‌ದಾರರುಗಳು ಇದರಿಂದ ಕೋರಲ್ಪ ಟ್ಟಿರುತ್ತೆ.

ಎ. ಚಲುವಯ್ಯಂಗಾರ್,
ಟ್ರೆಜರೀ ಆಫಿಸರ.

ತಾರೀಖು 30ನೇ ಜುಲೈ 1885.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಗೋರಿಬಿನೂರು ಸಬ್ ರಿಜಿಸ್ಟ್ರಾರ್ ಆಫಿಸಿನಲ್ಲಿ ಈ ಕೆಳಗೆ ವಿವರಿಸೋ ಣಾದ ರಿಜಿಸ್ಟ್ರಾರ ತಂಸೂಕು ಬೇವಾರಸಾಗಿ ನಿಂತಿರುತ್ತ, ಅದನ್ನ ಹಾಜರ್ಮಾಡಿದವರೆ ಆಗಲಿ ಅದರಲ್ಲಿ ಬಾಧ್ಯತೆ ವುಳ್ಳವರೇ ಆಗಲಿ ಈ ಲಾ ಗಾಯತು 1 ತಿಂಗಳೊಳಗಾಗಿ ಡಿಪೋ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಹಾಜರಾಗಿ ವಾಜಬಿ ಫೀಜ್ ಪಾವತೀ ಮಾಡಿ ವಾಪಸ್ ಪಡಿಯಬಹು ದು, ತಪ್ಪಿದರೆ ಇಂಡಿಯನ್ ರಿಜಿಸ್ಟ್ರೇಷನ್ ಆಕ್ಟ್ 85ನೇ ಸೆಕರ್ಷ ರೀತ್ಯಾ ಅದು ನಾಶಮಾಡಲ್ಪಡುವದು.

ಬಿಜಿಸ್ಟ್ರಾರ ಆಫೀಸ್.	ಬುಕ್ಕಿನ ಮತ್ತು ತಂಸೂಕಿನ ಸವಿ ನಂಬರ್.	ಕಕ್ಷಿಗಾರರ ಹೆಸರು. ತಂಸೂಕು ಬರದುಕೊಟ್ಟುವನ ಹೆಸರು ಮತ್ತು ವಾಸಸ್ಥಳ.	ಕಕ್ಷಿಗಾರರ ಹೆಸರು. ಬರಸಿಕೊಂಡವನ ಹೆಸರು ಮತ್ತು ವಾಸಸ್ಥಳ.	ತಂಸೂಕಿನ ತಾರೀಖು.	ಬಿಜಿಸ್ಟ್ರಾರಗೆ ಹಾಜರಾದ ತಾರೀಖು.	ರಿಜಿಸ್ಟ್ರಾರ ತಾರೀಖು.	ತಂಸೂಕಿನ ಸ್ವಭಾವ ಮತ್ತು ಕಿಮ್ಮತ್ತು.
ಗೋರಿಬಿದನೂರು ಸಬ್ ರಿಜಿಸ್ಟ್ರಾರ ಆಫೀಸ್.	1ನೇ ಬುಕ್ಕು 1883-84ನೇ ಇಸವಿ ನಂಬರ್ 44	ಮಂಜೇನಹಳ್ಳಿಲಿರುವ ಶಾನುಭೋಗ ರುಮವ ಚಿಕ್ಕಕೃಷ್ಣಪ್ಪನ ಕೃಷ್ಣಪ್ಪ	ಯಿದೇ ಗ್ರಾಮದಲ್ಲಿರುವ ಚಿಕ್ಕಬೈಲಪ್ಪನ ಕರಿಬಸಪ್ಪ	1883ನೇ ಇಸವಿ ಜುಲೈ ತಾ|| 1	1883ನೇ ಇಸವಿ ಜುಲೈ ತಾ|| 27	ಜುಲೈ 30	ಮಂಜೇನಹಳ್ಳಿ ಗ್ರಾಮದಲ್ಲಿ ಇರುವ ಮೂಳಿಗೆ ಮನೆ ಕಟ್ಟಿದ ಅಂಕಣ 27½ ಮೊಳ ಮನೆ 160 ರೂಪಾಯಿಗಳಿಗೆ ಕ್ರಯ ಮಾಡಿರುವದಾಗಿ.

ಎ. ಚಲುವಯ್ಯಂಗಾರ್,
ಫೌರ್ ರಿಜಿಸ್ಟ್ರಾರ್.

ತುಮಕೂರು ಡಿಸ್ಟ್ರಿಕ್ಟು.

ತಾರೀಖು 1ನೇ ಆಗಸ್ಟ್ 1885.

ತುಮಕೂರಲ್ಲಿ ಇರುವ ಮೈಸೂರು ಗವರ್ನಮೆಂಟ್ ಸೇವಿಂಗ್ಸ್ ಬ್ಯಾಂಕಿನ ಡಿಪಾಜಿಟ್‌ದಾರ್‌ರುಗಳು ಸ್ಯ 1885ನೇ ಇಸವಿ ಮಾರ್ಚಿ 31ನೇ ಮಟ್ಟಿಂವರಿಗೆ ಆಗುವ ಬಡ್ಡೀ ಫೈಸಲಾತಿಗೋಸ್ಕರ ತಮ್ಮತಮ್ಮ ಪ್ಯಾಸ್ ಬುಕ್ಕುಗಳನ್ನು ತುಮಕೂರು ಡಿಸ್ಟ್ರಿಕ್ಟು ಖಜಾನೆಯಲ್ಲಿ ಹಾಜರ್ಮಾಡುವಂತೆ ಇದರ ದೆಸೆಯಿಂದ ಕೋರಲ್ಪಟ್ಟಿದ್ದಾರೆ.

ಎ. ಕೃಷ್ಣರಾವ್,
ಫೌರ್ ಡೆಪ್ಯೂಟಿ ಕಮ್ಮಿಷನರ್ ಟ್ರೆಜರೀ ಇಲಾಖಾ.

ಮೈಸೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು ಜಡ್ಜ್‌ರ್‌ಯವರ ಕೋರ್ಟಿನಲ್ಲಿ.

1885ನೇ ಇಸವಿ ಅರ್ಜೀ ನಂಬರ್ 325.

ಮೃತಪಟ್ಟ ವೆಟೇಗೌಡರ ಆಸ್ತಿ ವಿಷಯದಲ್ಲಿ—

ಅರ್ಜೀದಾರ ದ್ಯಾವಂಣ, ಮೃತಪಟ್ಟ ಸದರೀ ಬೆಟೇಗೌಡರಿಗೆ ಮಗ ಆಜೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಮಂಡಿ ಮೊಹಲ್ಲಾ ಸ್ಥಳದ ಸದರೀ ದ್ಯಾವಂಣ, ಸದರೀ ವಾಸಸ್ಥನಾಗಿ ಮೃತಪಟ್ಟ ಬೆಟ್ಟೇಗವ್ವಡರ ಜೆಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬ್ಯೈ ಈ ಕೋರ್ಟಿಗೆ ಖಾಯಿಷ್ ಮಾಡಿಯತ್ತಾನೆ.

ಸದರೀ ದರಖಾಸ್ತುದಾರನಾದ ದ್ಯಾವಂಣನ ಅರ್ಜೀಯನ್ನು 1885ನೇ ಇಸವಿ ಆಗಸ್ಟ್ ತಿಂಗಳು ತಾರೀಖು 18ರಲ್ಲು ಕೇಳಿ ಸರ್ಟಿಫಿಕೆಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಶೆಮಾಡಲ್ಪಡುತ್ತೆ. ಆಕಾಲದಲ್ಲಿ ಸದರೀ ಮೃತಪಟ್ಟ ಬೆಟೇಗವ್ವಡರ ಆಸ್ತಿಗೆ ಹಕ್ಕುದಾರರಾದ ಮಿಕ್ಕವರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1885ನೇ ಇಸವಿ ಅರ್ಜೀ ನಂಬರ್ 327.

ಮೃತಪಟ್ಟ ಗೌಸ್‌ಸಾಹೇಬರ ಆಸ್ತೀ ವಿಷಯದಲ್ಲಿ—

ಅರ್ಜೇದಾರ್ ಖಾಸಿಂಬೀ, ಮೃತಪಟ್ಟ ಸದರೀ ಗೌಸ್‌ಸಾಹೇಬರಿಗೆ ಮಗಳು ಆಗಬೇಕೆಂಬ ಹಕ್ಕುದಾರೀ ಮೇಲೆ ತಿರುಮಕೂಡ್ಲು ನರ್ಸಿಪುರ ತಾಲ್ಲೂಕು ಯಿಡಾಳು ಸ್ಥಳದ ಸದರೀ ಖಾಸಿಂಬೀ ಸದರೀ ವಾಸಸ್ಥನಾಗಿ ಮೃತಪಟ್ಟ ಗೌಸ್‌ಸಾಹೇಬರ ಜೆಂದಗಿ ಬಗ್ಯಾಗಿ ಬರತಕ್ಕ